5. ಸಾರ್ವಜನಿಕ ಆರೋಗ್ಯ ಕಟ್ಟಡಗಳು.

6. ಸಣ್ಣ ನೀರಾವರಿ.

7. ಪಶು ಸಂಗೋಪನೆ.

ರಾಜ್ಯದಿಂದ ಗ್ರಾನೈಟ್ ಕಲ್ಲುಗಳನ್ನು ರಫ್ತು

39 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಗ್ರಾನೈಟ್ ಕಲ್ಲನ್ನು ರಫ್ತು ಮಾಡುವ ಬಗ್ಗೆ ಸರ್ಕಾರದವರು ಕೊಟ್ಟಿರುವ ಪರವಾನಿಗೆಗಳೆಷ್ಟು?*

(1983ರಿಂದ 1989 ಡಿಸೆಂಬರ್ ಕೊನೆಯ ವರೆವಿಗೆ ಮತ್ತು 1-1-1990ರಿಂದ 15-10-90ನೇಯವರಿಗೆ ಮತ್ತು 20ನೇ ಅಕ್ಟೋಬರ್ 1990ರಿಂದ 1-2-1991ನೇವರೆಗೆ)

ಆ) *ಈ ಪರವಾನಿಗೆಗಳಿಂದ ರಾಜ್ಯ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು?*

ಇ) *ಈ ಪರವಾನಿಗೆಗಳನ್ನು ಕೊಡುವಾಗ ಸರ್ಕಾರದವರು ಅನುಸರಿಸುವ ನೀತಿ ನಿಯಮಗಳೇನು?*

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) :

ಅ) ಯಾವುದೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ಸರಬರಾಜು

1026 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ಸರಬರಾಜನ್ನು ನಿರ್ದಿಷ್ಟ ಕಾಲಗಳಲ್ಲಿ ಮಾಡುವುದಾಗಿ ನಿಯಮ ರಚಿಸಿದ್ದರೂ ಅದನ್ನು ಸಮರ್ಪಕವಾಗಿ ಆಚರಣೆಗೆ ತರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಗ್ರಾಮಾಂತರ ಪ್ರದೇಶಕ್ಕೆ ವಿದ್ಯುತ್ ಸರಬರಾಜು ಮಾಡುವ ಅವಧಿಯಲ್ಲಿ ಅನೇಕ ಸಾರಿ ವಿದ್ಯುತ್ ನಿಲುಗಡೆ ಮಾಡಿ ಕೈಗಾರಿಕೆಗಳ ಪೂರೈಕೆಗೆ ಅನುಕೂಲ ಮಾಡಿಕೊಡಲು ಮಂಡಳಿಯ ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಗ್ರಾಮಾಂತರ ಪ್ರದೇಶದ ಪೂರೈಕೆಯಲ್ಲಿ ಮಧ್ಯೆ ಮಧ್ಯೆ ನಿಲುಗಡೆ ಆಗುವುದರಿಂದ ರೈತರಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಗ್ರಾಮಾಂತರ ಪ್ರದೇಶಗಳಿಗೆ ನಿರ್ದಿಷ್ಟ ಸಮಯದಲ್ಲಿ ವಿದ್ಯುತ್ ಸರಬರಾಜನ್ನು ನೀಡಲು ಮಂಡಳಿಯು ಶ್ರಮಿಸುತ್ತಿದೆ.

ಆ) ಮಂಡಳಿಯು ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ ಆರು ಗಂಟೆಗಳ ಕಾಲ ನಿರ್ವಹಿಸುತ್ತಿರುವ ನಿಯಮಿತ ಲೋಡ್ ಷೆಡ್ಡಿಂಗ್‌ನಿಂದ ಶೇಕಡ 60ಕ್ಕೂ ಹೆಚ್ಚಿಗೆ ಕೈಗಾರಿಕೆಗಳ ಲೋಡ್ ಇರುವ ಫೀಡರುಗಳನ್ನು ವಿನಾಯ್ತಿ ಗೊಳಿಸಿದೆ. ಆದ್ದರಿಂದ ಮಂಡಳಿಯ ಅಧಿಕಾರಿಗಳು ಕೈಗಾರಿಕೆಗಳ ವಿದ್ಯುತ್ ಪೂರೈಕೆಗೆ ಅನುಕೂಲ ಮಾಡಿಕೊಡುವ ವಿಷಯದಲ್ಲಿ ಶಾಮೀಲಾಗಿರುವ ಪ್ರಶ್ನೆ ಉದ್ಭವಿಸುವುದಿಲ್ಲ.